# ಕಂಡೀಷನ್ಸ್ ಅಪ್ಲೈ...

**ನಿಶ್ಚಿತಗೊಂಡ ಮದುವೆಗಳನ್ನು ಮುರಿಯಲು ಈಗ ಕಾರಣಗಳು ಬದಲಾಗಿವೆ!**

**■ ನಳಿನಿ ಟಿ. ಭೀಮಪ್ಪ**



ಇತ್ತೀಚೆಗೆ ನಿಶ್ಚಿತಾರ್ಥವಾದ ಮದುವೆಗಳು ಮದುವೆಯಲ್ಲಿ ಮುಕ್ತಾಯವಾಗುತ್ತವೋ ಅಥವಾ ಮುರಿದು ಬೀಳುತ್ತವೋ ಹೇಳುವುದಕ್ಕೇ ಬರುವುದಿಲ್ಲ. ಹಿಂದಿನ ಕಾಲದಲ್ಲಿ ಹುಡುಗನ ಕಡೆಯವರಿಂದಲೇ ಮುರಿದು ಬೀಳುತ್ತಿದ್ದ ಸಾಧ್ಯತೆಗಳು ಹೆಚ್ಚಿತ್ತು. ಈಗ ಕಾಲ ದೋಸೆ ತಿರುವಿ ಹಾಕಿರುವಂತಿದೆ.

ಈಚೆಗಷ್ಟೇ ನಿಶ್ಚಯವಾಗಿದ್ದ ಮದುವೆಯೊಂದು ಹುಡುಗಿ ಕಡೆಯಿಂದ ಕ್ಯಾನ್ಸಲ್ ಆಯ್ತು. ಕಾರಣ ಕೇಳಿದರೆ ಅಚ್ಚರಿಯಾಗಬಹುದು. ಹುಡುಗ ಹೈದರಾಬಾದ್‌ನಲ್ಲಿ ಸಾಫ್ಟ್‌ವೇರ್ ಎಂಜಿನಿಯರ್. ಹುಡುಗಿ ಎಂಬಿಎ ಮಾಡಿ ಬೆಂಗಳೂರಿನ ಕಂಪನಿಯೊಂದರಲ್ಲಿ ಕೆಲಸದಲ್ಲಿದ್ದಳು. ಇಬ್ಬರಿಗೂ ಒಪ್ಪಿಗೆಯಿತ್ತು. ಎರಡೂ ಮನೆಯವರು ಖುಷಿಯಿಂದಲೇ ನಿಶ್ಚಯ ಮಾಡಿ, ಮದುವೆ ತಾರೀಕನ್ನೂ ಗೊತ್ತು ಮಾಡಿದ್ದರು. ನಿಶ್ಚಿತಾರ್ಥದ ನಂತರ ಹುಡುಗ ಹುಡುಗಿಯನ್ನು ಭೇಟಿ ಮಾಡಲು ಬೆಂಗಳೂರಿಗೆ ಒಂದೆರಡು ಬಾರಿ ಹೋಗಿದ್ದ. ಪರಸ್ಪರ ಆಸೆ, ಅಭಿರುಚಿ, ಭಾವನೆ, ಸಂಸಾರ ಎಲ್ಲದರ ಬಗ್ಗೆ ತಮ್ಮ ತಮ್ಮ ಅಭಿಪ್ರಾಯ ಹಂಚಿಕೊಂಡಿದ್ದಾರೆ.

ಎರಡನೇ ಭೇಟಿ ನಂತರ ಹುಡುಗನ ಪೋಷಕರಿಗೆ ಹುಡುಗಿ ಕಡೆಯವರಿಂದ ಫೋನ್. ‘ನಿಮ್ಮ ಮಗನಿಗೆ ಸಂಸ್ಕಾರ ಕಲಿಸಿಲ್ಲ, ತಂದೆ–ತಾಯಿ ಎನ್ನುವ ಗೌರವವಿಲ್ಲ, ನಮ್ಮ ಹುಡುಗಿಗೆ ಈ ಮದುವೆ ಇಷ್ಟವಿಲ್ಲ’ ಎಂದು ಹೇಳಿದ್ದಾರೆ. ತಲೆ ಬುಡ ಗೊತ್ತಾಗದೆ ಹುಡುಗನ ತಂದೆ ತಾಯಿ ಮಗನ ವಿಚಾರಿಸಿದಾಗ, ‘ನಾನೇನೂ ಹೇಳಿಲ್ಲಮ್ಮ. ಹೈದರಾಬಾದ್‌ನಲ್ಲಿ ನಾವಿಬ್ಬರೇ, ಸ್ವತಂತ್ರ ಹಕ್ಕಿಗಳಾಗಿ ಹಾರಾಡಿಕೊಂಡಿರಬಹುದು, ಅತ್ತೆ ಮಾವ ಕಾಟ ನಿನಗಿಲ್ಲ ಅಂತ ಹೇಳಿದ್ದೆ. ಆದರೆ ಆಕೆಗೆ ಅತ್ತೆ ಮಾವ ಯಾವಾಗಲೂ ಜೊತೆಗಿರಬೇಕಂತೆ, ಮದುವೆ ನಂತರ ಹೈದರಾಬಾದ್‌ಗೇ ನಿಮ್ಮನ್ನು ಕರೆಸಬೇಕಂತೆ, ಅವರು ಊರು ಬಿಟ್ಟು ಬರಲ್ಲ ಎಂದು ಎಷ್ಟು ಹೇಳಿದರೂ ಕೇಳಲಿಲ್ಲ’ ಎಂದಾಗ ಪೋಷಕರಿಗೆ ಹೇಗೆ ಪ್ರತಿಕ್ರಿಯಿಸಬೇಕೋ ತಿಳಿಯಲಿಲ್ಲ. ಈಗಿನ ಕಾಲದಲ್ಲಿ ಅತ್ತೆ ಮಾವ ಇಲ್ಲದಿರುವ ಮನೆ ಇಷ್ಟಪಡುವ ಹುಡುಗಿಯರು, ಅವರನ್ನು ಸ್ಕ್ರ್ಯಾಪ್‌ಗೆ ಹೋಲಿಸುವವರು ಹೆಚ್ಚು. ಇಲ್ಲಿ ಕಾರಣವೇ ಬೇರಿತ್ತು.

ಸಾಮಾನ್ಯವಾಗಿ ಹುಡುಗಿಯರ ಕಂಡೀಷನ್‌ಗಳು ಎಂದರೆ, ವಿದೇಶದಲ್ಲಿ ಕೆಲಸ ಮಾಡುತ್ತಿರುವ ಹುಡುಗರಿಗೇ ಮೊದಲ ಪ್ರಾಮುಖ್ಯತೆ. ನಂತರದ್ದು, ಸಣ್ಣ ಕೆಲಸವಾದರೂ ಪರವಾಗಿಲ್ಲ, ಹುಡುಗ ಬೆಂಗಳೂರಿನಲ್ಲಿರಬೇಕು. 10 ಲಕ್ಷಕ್ಕಿಂತ ಕಡಿಮೆ ಪ್ಯಾಕೇಜಿರುವ ಗಂಡಿನ ವಿವರಗಳನ್ನು ನೋಡುವುದಕ್ಕೇ ಹೋಗದವರಿದ್ದಾರೆ. ಮತ್ತೊಂದು ಕಡೆ ಹುಡುಗನಿಗೆ ಒಳ್ಳೆಯ ಸಂಬಳದ ಪ್ಯಾಕೇಜ್ ಇದ್ದರೂ, ‘ವರ್ಕ್ ಫ್ರಂ ಹೋಂ ಕೆಲಸ ಮಾಡುತ್ತಾನೆ, ಮನೆಯಲ್ಲಿ ಸದಾ ಕಾಲ ಇರುವ ಗಂಡ ಬೇಡ’ ಎನ್ನುವವರೂ ಉಂಟು.

ಹುಡುಗಿಯರ ಬಯೋಡೇಟಾ ನೋಡಿದರೆ ಭಯಪಡುವ ಪರಿಸ್ಥಿತಿ. ಒಂದು ಹುಡುಗಿ ಬಯೋಡೇಟಾದಲ್ಲಂತೂ ‘ಐ ಡೋಂಟ್ ಕುಕ್’ ಎಂದು ನೇರವಾಗಿಯೇ ಬರೆದಿತ್ತು. ಮತ್ತೊಂದು ಹುಡುಗಿ ‘ನಾನು ಕೆಲಸಕ್ಕೆ ಹೋಗುವವಳು, ವೀಕೆಂಡಿನಲ್ಲಿ ಪಬ್ಬು, ಶಾಪಿಂಗ್‌ಗೆ ಹೋಗಲೇಬೇಕು. ಅದಕ್ಕೆ ಅಭ್ಯಂತರವಿಲ್ಲದಿದ್ದರೆ ನೋಡಲು ಬರಬಹುದು’ ಎಂದು ಬ್ರೋಕರ್ ಮೂಲಕ ಹೇಳಿಸಿದ್ದಳು.

ಹತ್ತಿರ ಸಂಬಂಧಿಯೊಬ್ಬರ ಮಗನೊಬ್ಬ ಎರಡು ಮೂರು ವಿಷಯದಲ್ಲಿ ಸ್ಪೆಷಲೈಸೇಷನ್ ಮಾಡಿಕೊಂಡು ದೊಡ್ಡ ಆಸ್ಪತ್ರೆಯಲ್ಲಿ ವೈದ್ಯವೃತ್ತಿ ಮಾಡುತ್ತಿದ್ದಾನೆ. ವಯಸ್ಸು ಮೂವತ್ನಾಲ್ಕು ಆದರೂ, ಮದುವೆ ಮುಂದೂಡುತ್ತಲೇ ಇದ್ದಾನೆ. ‘ನನ್ನ ವೃತ್ತಿ ಸದಾ ಬಿಜಿ ಇರುವಂಥದ್ದು, ಮದುವೆ ನಂತರ ಹುಡುಗಿ ಅಲ್ಲಿ ಇಲ್ಲಿ ಕರೆದುಕೊಂಡು ಹೋಗು, ಬೇಗ ಮನೆಗೆ ಬಾ ಅಂತೆಲ್ಲ ಹೇಳಿದರೆ ನನಗೆ ಸಮಯವಿಲ್ಲ. ನನ್ನ ಕರಿಯರ್ ತುಂಬ ಮುಖ್ಯ, ಮದುವೆಯಾಗದೆ ಬೇಕಾದರೆ ಹಾಗೆಯೇ ಇರುತ್ತೇನೆ. ಮದುವೆಯಾಗಿರುವ ನನ್ನ ಫ್ರೆಂಡ್ಸ್ ಮನೆಗಳಲ್ಲಿ ಪ್ರತಿದಿನ ಇವೇ ಜಗಳ ಕೇಳೀ ಕೇಳೀ ಸಾಕಾಗಿದೆ’ ಎಂದಾಗ ಅವರಪ್ಪ ಅಮ್ಮ ತಲೆ ತಲೆ ಚಚ್ಚಿಕೊಳ್ಳುವುದಷ್ಟೇ ಬಾಕಿ ಇತ್ತು.

ಪ್ರತಿಕ್ರಿಯಿಸಿ: feedback@sudha.co.in

